ಚಾಮುಂಡೇಶ್ವರಿ ವಿದ್ಯುತ್ ಸರಬರಾಜು
ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ,
ಚಾವಿಸನಿನಿ, ಮೈಸೂರು-570017
Telephone No: 0821-2417101

CHAMUNDESHWARI ELECTRICITY
SUPPLY CORPORATION LIMITED
*(A Government of Karnataka Undertaking)*
Corporate Office,
CESC, Mysuru-570017
Web Site: www.cescmysore. karnataka.gov.in
E-mail ID: gmtech@cescmysore.org

Company Identity Number[CIN]:- U40109KA2004SGC035177

ಕ್ರಮಾಂಕ:ಪ್ರವ್ಯ(ತಾ)/ಉ.ಪ್ರ.ವ್ಯ(ತಾ)/ಸ.ಪ್ರ.ವ್ಯ(ತಾ)-4/C1-2022/2021-22 /cys-32 ದಿನಾಂಕ: 07 APR 2021

## ಸುತ್ತೋಲೆ

**ವಿಷಯ:** ಗಂಗಾ ಕಲ್ಯಾಣ, ರೈತರ ನೀರಾವರಿ ಪಂಪ್ ಸೆಟ್, TSP, SCP ಮತ್ತು ಇತರೇ ಕಾಮಗಾರಿಗಳಡಿ ವಿದ್ಯುತ್ ಸಂಪರ್ಕ ಕಲ್ಪಿಸುವ ಫಲಾನುಭವಿಗಳ ಮಾಹಿತಿಗಳನ್ನು ಕಡ್ಡಾಯವಾಗಿ ಪಡೆಯುವ ಬಗ್ಗೆ.

**ಉಲ್ಲೇಖ:** ಮಾನ್ಯ ನಿರ್ದೇಶಕರು (ತಾಂತ್ರಿಕ) ರವರ ಅನುಮೋದಿತ ಟಿಪ್ಪಣಿ ದಿನಾಂಕ :05.04.2021

**********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಚಾವಿಸನಿನಿಯ ವ್ಯಾಪ್ತಿಯಲ್ಲಿ ನಿರ್ವಹಿಸುತ್ತಿರುವ ಗಂಗಾ ಕಲ್ಯಾಣ, ರೈತರ ನೀರಾವರಿ ಪಂಪಸೆಟ್ ಸ್ಥಾವರಗಳು, TSP, SCP & ಇತರೇ ಕಾಮಗಾರಿಗಳಡಿ ವಿದ್ಯುತ್ ಸಂಪರ್ಕ ಕಲ್ಪಿಸುವ ಫಲಾನುಭವಿಗಳ ಹಾಲಿ ಪಡೆಯಲಾಗುತ್ತಿರುವ ಮಾಹಿತಿಗಳ ಜೊತೆಗೆ ಮೊಬೈಲ್/ ಸ್ಥಿರ ದೂರವಾಣಿ ಸಂಖ್ಯೆ, ಆಧಾರ, ಪಡಿತರ ಚೀಟಿ, ಬ್ಯಾಂಕ್ ಖಾತಾ ಸಂಖ್ಯೆ &IFSC Code, ಜಕಾತಿ, ಜಾತಿ ಪ್ರಮಾಣ ಪತ್ರ, ಗ್ರಾಮ ಪಂಚಾಯಿತಿ / ತಾಲ್ಲೂಕು ಪಂಚಾಯತಿ, ವಿಧಾನ ಸಭಾ ಕ್ಷೇತ್ರ , ಲೋಕಸಭಾ ಕ್ಷೇತ್ರ , ಸ್ಥಾವರದ GPS Latitude & Longitude ಮಾಹಿತಿಗಳನ್ನು ಕಡ್ಡಾಯವಾಗಿ ಪಡೆದು ತಂತ್ರಾಂಶದಲ್ಲ ನಿರ್ವಹಿಸುವುದು. ಈಗಾಗಲೇ ಸರಕಾರದ ನಿರ್ದೇಶನದಂತೆ ಗಂಗಾ ಕಲ್ಯಾಣ ಮತ್ತು TSP & SCP ಫಲಾನುಭವಿಗಳ ಮೇಲೆ ತಿಳಿಸಿರುವ ಮಾಹಿತಿಗಳನ್ನು ಘನ ಕರ್ನಾಟಕ ಸರ್ಕಾರದ ವೆಬ್‌ಸೈಟ್‌ನಲ್ಲಿ ಅಳವಡಿಸುವಂತೆ ಮತ್ತು 10 ಹೆಚ್.ಪಿ. ವರೆಗಿನ ಐ.ಪಿ. ಸ್ಥಾವರಗಳು ಹಾಗೂ ಬಿ.ಜೆ/ ಕೆ.ಜೆ ಸ್ಥಾವರಗಳಲ್ಲಿ ಸಾಮಾನ್ಯ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸ್ಥಾವರಗಳ ಅಂಕಿ ಅಂಶಗಳನ್ನು ಸಲ್ಲಿಸಲು ಸೂಚಿಸಲಾಗಿರುತ್ತದೆ.

ಈ ಹಿನ್ನಲೆಯಲ್ಲಿ ಇನ್ನು ಮುಂದೆ ಕಡ್ಡಾಯವಾಗಿ ಆಯಾ ಕ್ಷೇತ್ರದ ಕ್ಷೇತ್ರಾಧಿಕಾರಿಯವರು ಮೇಲೆ ತಿಳಿಸಿರುವ ಮಾಹಿತಿಗಳನ್ನು ಗಂಗಾ ಕಲ್ಯಾಣ, ರೈತರ ನೀರಾವರಿ ಪಂಪ್ ಸೆಟ್ ಸ್ಥಾವರಗಳು, TSP. SCP ಮತ್ತು ಇತರೇ ಎಲ್ಲ ಕಾಮಗಾರಿಗಳಡಿ ವಿದ್ಯುತ್ ಸಂಪರ್ಕ ಕಲ್ಪಿಸುವ ಅರ್ಜಿದಾರರ/ ಫಲಾನುಭವಿಗಳ ಮಾಹಿತಿಯನ್ನು ಸಂಗ್ರಹಿಸಿ ಸೂಕ್ತ ದೃಢೀಕರಣದೊಂದಿಗೆ ನಿರ್ವಹಿಸುವಂತೆ ಸೂಚಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

07/4/2021

ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)
ಚಾ.ವಿ.ಸ.ನಿ.ನಿ, ಮೈಸೂರು.

**ಪ್ರತಿಗಳು**

1. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕಾ ಮತ್ತು ಪಾ ವಲಯ, ಚಾವಿಸನಿನಿ.
2. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕಾ& ಪಾ ವೃತ್ತ , ಚಾವಿಸನಿನಿ.
3. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ),ಕಾ ಮತ್ತು ಪಾ ವಿಭಾಗ, ಚಾವಿಸನಿನಿ.
4. ಆಪ್ತ ಸಹಾಯಕರು ವ್ಯವಸ್ಥಾಪಕ ನಿರ್ದೇಶಕರು/ ತಾಂತ್ರಿಕ ಸಹಾಯಕರು ನಿರ್ದೇಶಕರು(ತಾಂತ್ರಿಕ)ಇವರ ಗಮನಕ್ಕೆ ಹಾಗೂ ವಿಷಯವನ್ನು ವ್ಯ.ನಿ/ ನಿ.(.ತಾ) ರವರ ಗಮನಕ್ಕೆ ತರಲು ಸಲ್ಲಿಸಿದೆ.

ಮುಖ್ಯ ಕಡತ/ ಕಛೇರಿ ಪ್ರತಿ